ಹೆಚ್ಚು ಸೊಗಸಾಗಿ ಕಾಣುವಂತೆ ನೀಡುವ ಟಚ್, ಉಡುವ ರೀತಿ ಎಲ್ಲವೂ ಬದಲಾಗಿವೆ. ಆದರೆ ವಿನ್ಯಾಸಗಾರರು ಮೂಲ ಸಂಪ್ರದಾಯವನ್ನೇ ಉಳಿಸಿಕೊಂಡು ಈ ಬದಲಾವಣೆಗೆ ಕೈ ಹಾಕಿದ್ದಾರೆ ಎಂಬುದಂತೂ ನಿಜ. ಅದರಲ್ಲೂ ದಕ್ಷಿಣ ಭಾರತವನ್ನು ತೆಗೆದುಕೊಂಡರೆ ಮದುವೆಯಂತಹ ಶುಭ ಕಾರ್ಯಗಳ ಸಂದರ್ಭದಲ್ಲಿ ಸಂಪ್ರದಾಯಕ್ಕೆ ಒತ್ತು ಕೊಡುವುದು ಎದ್ದು ಕಾಣುತ್ತದೆ. ಹಾಗಾಗಿ ಎಥ್ನಿಕ್‌ನಿಂದ ಸೆಮಿ– ಎಥ್ನಿಕ್‌ಗೆ ಹೊರಳಿರಬಹುದು ಅಷ್ಟೆ, ಪೂರ್ತಿ ಸಾಂಪ್ರದಾಯಕ ವಿನ್ಯಾಸದಿಂದ ಆಚೆ ಜಾರಿಲ್ಲ. ಹೀಗಾಗಿ ಮದುವೆ ಸೀರೆಗಳೆಂದರೆ ರಕ್ತಗೆಂಪು, ಕಪ್ಪು ಕೆಂಪು, ಗುಲಾಬಿ, ಕೇಸರಿ, ಚಿನ್ನದ ರಂಗಿನಲ್ಲೇ ಪ್ರಯೋಗ ಮಾಡುವುದು ಕಡಿಮೆಯಾದರೂ ಸಂಪೂರ್ಣ ನಿಂತಿಲ್ಲ. ಪೇಸ್ಟಲ್, ಮೆಟಲಿಕ್ ರಂಗನ್ನೂ ಬಳಸಿ ಗ್ರಾಹಕರ ಪ್ರತಿಕ್ರಿಯೆಯನ್ನು ಗಮನಿಸುವ ಮಾರುಕಟ್ಟೆ ತಂತ್ರಗಳೂ ಆಗಾಗ ಕಂಡುಬರುತ್ತವೆ. ಜೊತೆಗೆ ಲೇಸ್, ಝರ್ದೋಸಿಯಂತಹ ಕಸೂತಿಯನ್ನೂ ವಿನ್ಯಾಸಗಾರರು ಮಿಶ್ರಣ ಮಾಡುತ್ತಿದ್ದಾರೆ.

ಶೈಲಿಯಲ್ಲೂ ಕೂಡಾ ಆಧುನಿಕ ಅವಶ್ಯಕತೆಗಳಿಗೆ, ಅನುಕೂಲಗಳಿಗೆ ತಕ್ಕಂತೆ ಹಲವು ಬದಲಾವಣೆಗಳಾಗಿವೆ ಅಷ್ಟೆ. ಸೀರೆ ಉಟ್ಟು ರೂಢಿ ಇಲ್ಲದ ವಧು ಮದುವೆ ಮಂಟಪದಲ್ಲಿ ಸಂಪ್ರದಾಯಗಳನ್ನು, ವಿಧಿವಿಧಾನಗಳನ್ನು ಅನುಸರಿಸಲು ಅಡಚಣೆಯಾಗುತ್ತದೆ ಎಂದಾದರೆ ಅದಕ್ಕೂ ಪರಿಹಾರ ನೀಡುವಂತಹ ಸೀರೆಗಳನ್ನು ಚಾಣಾಕ್ಷ ವಿನ್ಯಾಸಗಾರರು ಗ್ರಾಹಕರಿಗೆ ತಲುಪಿಸುವ ಕೆಲಸ ಮಾಡಿದ್ದಾರೆ. ಉದಾಹರಣೆಗೆ ಲಂಗವನ್ನು ಸೇರಿಸಿ ಹೊಲಿದಿರುವಂತಹ ಸೀರೆಗಳು, ಸೆರಗನ್ನು, ನೆರಿಗೆಗಳನ್ನು ಹೊಲಿದು ಭದ್ರಪಡಿಸಿದಂತಹ ಸೀರೆಗಳು. ಇವು 'ರೆಡಿ ಟು ವೇರ್' ಹೆಸರಿನಿಂದ ಮಾರುಕಟ್ಟೆಗೆ ದಾಂಗುಡಿ ಇಟ್ಟರೂ ಅದೇಕೋ ಗ್ರಾಹಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಸಫಲವಾಗಿಲ್ಲ. ಈಗಷ್ಟೇ ಸೀರೆಗಳ ಸಂಪರ್ಕಕ್ಕೆ ಬಂದಿರುವ ಕಾಲೇಜು ಯುವತಿಯರು ಕೇಳಿ ಖರೀದಿಸುತ್ತಾರೆ



## ಮುಡಿಯಿಂದ ಅಡಿಯತನಕ..

ಮದುವೆಯಲ್ಲಿ ಕೇಶಾಲಂಕಾರಕ್ಕೆ ವಿಶೇಷ ಆದ್ಯತೆ. ಹಾಗೆಯೇ ತಲೆಯ ಆಭರಣಗಳು ಕೂಡ. ಮುಂದಲೆ ಬೊಟ್ಟು, ಮುಂದಲೆ ಪಟ್ಟಿ, ತುರುಬಿಗೆ ಧರಿಸಬಹುದಾದಂತಹ ಬಿಲ್ಲೆ, ಜಡೆ ಪಿನ್ನುಗಳು, ಜಡೆ ಬಂಗಾರ, ಚಿನ್ನದ ಗುಲಾಬಿ, ಚಿನ್ನದ ಸೇವಂತಿಗೆ ಹೂವು.. ಇವೆಲ್ಲ ಸಾಂಪ್ರದಾಯಕ ಆಭರಣಗಳು ಇದೀಗ ಫ್ಯಾಷನ್ ಎನಿಸಿವೆ.

ಕಿವಿಗೆ ಝುಮ್ಕಿ, ತೂಗಾಡುವ ಷಾಂಡೆಲಿಯರ್ ಜೊತೆಗೆ ಬುಗುಡಿ ಧರಿಸುವವರೂ ಇದ್ದಾರೆ. ಓಲೆಗೆ ಜೋಡಿಸಿ ತಲೆಗೆ ಸಿಕ್ಕಿಸಿಕೊಳ್ಳುವಂತಹ ಕೆನ್ನೆ ಸರಪಣಿ, ಕಿವಿಯ ನೇರಕ್ಕೆ ಇರುವಂತಹ ಮಾಟಿ ಶೋಭೆ ನೀಡುತ್ತದೆ. ಮೂಗಿಗೆ ಮೂಗುತಿಯಲ್ಲದೇ ಮರಾಠಿ ಆಭರಣವಾದ ನತ್ತು ಇತ್ತೀಚೆಗೆ ಜನಪ್ರಿಯವಾಗಿದೆ. ಉತ್ತರ ಭಾರತೀಯರಲ್ಲಿ ಕೆಲವರಲ್ಲಿ ದೊಡ್ಡ ರಿಂಗ್ ಧರಿಸಿ ಅದಕ್ಕಿರುವ ಚೈನನ್ನು ಕಿವಿಗೆ ಜೋಡಿಸಿಕೊಳ್ಳುವ ಸಂಪ್ರದಾಯವಿದೆ.

ಕತ್ತು ಅತ್ಯಂತ ಶ್ರೀಮಂತ. ನೆಕ್ಲೇಸ್, ಉದ್ದನೆಯ ಕಾಸಿನ ಸರ, ಚಪಲಹಾರ, ಚಕ್ರ ಸರ, ಅವಲಕ್ಕಿ ಸರ, ಕಂಠಿ ಸರ, ಬೋರ ಮಾಲೆ, ಮೋಹನ ಮಾಲೆ, ಶಕುಂತಲ ಹಾರ, ವಜ್ರಾಟಿಕ ಅಥವಾ ಗೆಜ್ಜೆ ಟಿಕ್ಕಿ, ಕಟ್ಟಾಣಿ, ಮುತ್ತು– ಹವಳಗಳ ಸರ ಎಂದು ತರಾವರಿ ಸರಗಳನ್ನು ಹಾಕಿಕೊಳ್ಳುವುದರ ಜೊತೆಗೆ ಅಗಲವಾದ ಪದಕವಿರುವ ಚೈನ್ ಹಾಕಿಕೊಂಡು, ಕರಿಮಣಿ ಸರ ಧರಿಸುವುದು ಈಗಿನ ಫ್ಯಾಷನ್.

ತೋಳಿಗೆ ವಂಕಿ, ತೋಳುಬಂಧಿ, ಕೈಗಳಿಗೆ ವಿವಿಧ ನಮೂನೆಯ ಬಳೆಗಳು. ಪಾಟಲಿ, ಬಿಲ್ವಾರ, ತೋಡೆ, ಕಡ, ಹವಳ– ಮುತ್ತಿನ– ಕರಿಮಣಿ ಬಳೆಗಳು. ಐದೂ ಬೆರಳುಗಳ ಉಂಗುರ ಬಳಸಿದ ಚೈನುಗಳು ಬಳೆಯಲ್ಲಿ ಸೇರುವ ಹಾಥ್‌ಫೂಲ್. ಸೊಂಟಕ್ಕೆ ವಡ್ಯಾಣ ಅಥವಾ ಡಾಬು. ಕಾಲಿಗೆ ಬೆಳ್ಳಿ ಚೈನು, ಕಾಲುಂಗುರ, ಪಿಲ್ಲಿ.